9-72-(19)

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಆರ್ ಧರ್ಮಸೇನ ಇವರಿಂದ ನಿಯಮ-72 ರಡಿಯಲ್ಲಿ ನೀಡಲಾದ ಗಮನ ಸೆಳೆಯುವ ಸೂಚನೆಗೆ ಉತ್ತರ.

ಗಮನ ಸೆಳೆಯುವ ಸೂಚನೆ:-

"ರಾಜ್ಯದಲ್ಲಿ ಸುಮಾರು 4 ಲಕ್ಷಕ್ಕೂ ಅಧಿಕ ಬೀಡಿ ಕಾರ್ಮಿಕರು ವಿವಿಧ ಕಾರಣಗಳಿಗಾಗಿ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದು, ಸರ್ಕಾರದ ವಿವಿಧ ಧೋರಣೆಯಿಂದ ಪ್ರಸ್ತುತ ಅನೇಕ ಬೀಡಿ ಉದ್ದಿಮೆಗಳು ನಶಿಸಿ ಹೋಗುತ್ತಿದೆ. ಈ ವೃತ್ತಿಯನ್ನೇ ನಂಬಿಕೊಂಡಿರುವ ಬಡ ಕೂಲಿ ಕಾರ್ಮಿಕರು ಕೆಲಸವಿಲ್ಲದೇ ತಮ್ಮ ಕುಟುಂಬಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗದೇ ಸಾಲಗಳಿಗೆ ಸಿಲುಕಿ ಬೀದಿ ಪಾಲಾಗುತ್ತಿದ್ದು, ಅನ್ಯ ಮಾರ್ಗವಿಲ್ಲದೇ ಅತ್ಮಹತ್ಯೆಗೆ ಶರಣಾಗಿರುವ ಉದಾಹರಣೆಗಳು ಇರುವುದರಿಂದ ಈ ಬೀಡಿ ಕಾರ್ಮಿಕರಿಗೆ ಸರ್ಕಾರದಿಂದ ವಿಶೇಷ ಭತ್ಯೆ ಹಾಗೂ ಸಾಮಾಜಿಕ ಭದ್ರತೆಯನ್ನು ಒದಗಿಸುವ ಬಗ್ಗೆ ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯ ಬಯಸುತ್ತೇನೆ".

ಉತ್ತರ:-

ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಒಟ್ಟು 364 ಬೀಡಿ ಉದ್ದಿಮೆಗಳು ಬೀಡಿ ಮತ್ತು ಸಿಗಾರ್ ಕಾರ್ಮಿಕರ (ಸೇವಾ ಷರತ್ತುಗಳು) ಕಾಯ್ದೆ 1966 ರಡಿ ನೋಂದಣಿಯಾಗಿರುತ್ತದೆ. ನೋಂದಣಿಯಾದ ಬೀಡಿ ಸಂಸ್ಥೆಗಳಲ್ಲಿ 31,559 ಪುರುಷ ಕಾರ್ಮಿಕರು ಹಾಗೂ 2,15,729 ಮಹಿಳಾ ಕಾರ್ಮಿಕರು ಸೇರಿದಂತೆ ಒಟ್ಟು 2,47,288 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. 31,559 ಪುರುಷ ಕಾರ್ಮಿಕರ ಪೈಕಿ 29,026 ಪುರುಷ ಕಾರ್ಮಿಕರು ತಮ್ಮ ಮನೆಗಳಿಂದ ಹಾಗೂ ಉಳಿದ 2533 ಪುರುಷ ಕಾರ್ಮಿಕರು ಬೀಡಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದೇ ರೀತಿ 2,12,647 ಮಹಿಳಾ ಕಾರ್ಮಿಕರು ತಮ್ಮ ಮನೆಗಳಿಂದ ಹಾಗೂ 3,082 ಮಹಿಳಾ ಕಾರ್ಮಿಕರು ಬೀಡಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

2,13,418 ಮಹಿಳಾ ಕಾರ್ಮಿಕರು ಹಾಗೂ 31,246 ಪುರುಷ ಕಾರ್ಮಿಕರು ಸೇರಿದಂತೆ ಒಟ್ಟು 2,44,664 ಬೀಡಿ ಕಾರ್ಮಿಕರಿಗೆ ಕಾಯ್ದೆಯಡಿ ಗುರುತಿನ ಚೀಟಿಯನ್ನು ನೀಡಲಾಗಿರುತ್ತದೆ. 1,000 ಬೀಡಿಗಳನ್ನು ಕಟ್ಟಲು ರೂ. 245.68 ಹಾಗೂ 50,000 ಬೀಡಿಗಳನ್ನು ಲೇಬಲಿಂಗ್ / ಬಂಡಲಿಂಗ್ ಮಾಡಲು ರೂ. 275.68 ಕನಿಷ್ಠ ವೇತನವನ್ನು 2020-21ನೇ ಸಾಲಿಗೆ ನಿಗಧಿಪಡಿಸಲಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಬೀಡಿ ಕಾರ್ಮಿಕರು ಕೆಲಸವಿಲ್ಲದೆ ತಮ್ಮ ಕುಟುಂಬಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗದೇ ಸಾಲಗಳಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಯಾವುದೇ ಪ್ರಕರಣಗಳು ಈ ಇಲಾಖೆಯಲ್ಲಿ ವರದಿಯಾಗಿರುವುದಿಲ್ಲ. ಅದೇ ರೀತಿ ಕಳೆದ ಒಂದು ವರ್ಷಗಳಲ್ಲಿ ಬೀಡಿ ಕಾರ್ಮಿಕರು ಉದ್ಯೋಗವನ್ನು ಕಳೆದುಕೊಂಡಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಬೀಡಿ ಕಾರ್ಮಿಕರ ಸೇವಾ ಷರತ್ತುಗಳು, ಬೀಡಿ ಸಂಸ್ಥೆಗಳು ಹಾಗೂ ಗುತ್ತಿಗೆದಾರರ ನೋಂದಣಿ, ಕನಿಷ್ಠ ವೇತನ ದರದ ನಿಗಧಿ ಹಾಗೂ ಕಾರ್ಮಿಕ ಕಾಯ್ದೆಗಳಡಿ ಅನುಷ್ಠಾನವನ್ನು ರಾಜ್ಯ ಸರ್ಕಾರವು ನಿರ್ವಹಿಸುತ್ತದೆ. ಬೀಡಿ ಕಾರ್ಮಿಕರಿಗಾಗಿ ಕೇಂದ್ರ ಸರ್ಕಾರವು ಆರೋಗ್ಯ ಯೋಜನೆ ಸೇರಿದಂತೆ ಪ್ರತ್ಯೇಕವಾಗಿ ಕೆಲವು ಕಲ್ಯಾಣ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

**ಕಾಇ 340 ಎಲ್ಇಟಿ 2020**

*(ಅರಬೈಲ್ ಶಿವರಾಂ ಹೆಬ್ಬಾರ್)*
**ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು**